ಶ್ರೀ ಎ.ಬಿ.ರಮೇಶಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ನನ್ನ ಪ್ರಶ್ನೆಗೆ ಉತ್ತರವೇ ಬಂದಿಲ್ಲ ಸರ್.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ನಾಳೆ ಬೆಳಿಗ್ಗೆ ಬರುತ್ತದೆ. Held over Question ನಲ್ಲಿ ಬರುತ್ತದೆ, ಇವತ್ತಿಲ್ಲ. ಇವತ್ತಿನ ಪ್ರಶ್ನೋತ್ತರದಲ್ಲಿ ನಿಮ್ಮ ಪ್ರಶ್ನೆಯಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾದ್ಯಕ್ಷರೆ, ಅವರು ಕೇಳುತ್ತಿರುವುದು ಇಷ್ಟೆ, ಮೊನ್ನೆ ಲೋಕೋಪಯೋಗಿ ಇಲಾಖೆ ಸಚಿವರು ನಾಳೆ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅಧಿಕಾರಿಗಳಿಂದ ಉತ್ತರವನ್ನು ತರಿಸಿ ಕೆ–ಶಪ್–2 ನಲ್ಲಿ ಮೊದಲನೇ ಹಂತದಲ್ಲಿ 585 ಕಿ.ಮೀ. ರಸ್ತೆಯಾಗಿತ್ತು. ಅದರಲ್ಲಿ ಕೆಲವು ಬದಲಾವಣೆ ಮಾಡಿದ್ದಾರೆ ಎಂದು ನಾನು ಮೊನ್ನೆ ರೈಸ್ ಮಾಡಿದ್ದೆ. ಅದಕ್ಕೆ ನಾಡಿದ್ದು ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದರು. ಅದನ್ನು Held over questionನಲ್ಲಿ ಮಾಡಿರುವಿರಾ?

ಅಧ್ಯಕ್ಷರು: ಹೌದು, ನಾಳೆ ಬೆಳಿಗ್ಗೆ ಉತ್ತರ ಕೊಡಿಸುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ: ಆಯಿತು.

ಅಧ್ಯಕ್ಷರು: ಈಗ ಸಿದ್ದರಾಮಯ್ಯನವರು 2008–09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿಯನ್ನು ಒಪ್ಪಿಸುವುದು.

2.ವರದಿಯನ್ನೊಪ್ಪಿಸುವುದು

ಶ್ರೀ ಸಿದ್ದರಾಮಯ್ಯ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಅರಣ್ಯ, ಪರಿಸರ, ಜೀವಿಶಾಸ್ತ್ರ ಇಲಾಖೆಗೆ ಸಂಬಂಧಿಸಿದ ಮೊದಲನೆ ಹಾಗೂ ಎರಡನೇ ವರದಿಗಳನ್ನು ಸದನದಲ್ಲಿ ನಿಮ್ಮ ಅನುಮತಿಯೊಡನೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ವಿತ್ತೀಯ ಕಾರ್ಯಕಲಾಪಗಳು

2009–10ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಅಧ್ಯಕ್ಷರು: ಈಗ ಸಿದ್ಧರಾಮಯ್ಯನವರು ಬಜೆಟ್ ಮೇಲೆ ಮಾತನಾಡಲಿಕ್ಕೆ ಪ್ರಾರಂಭ ಮಾಡಬಹುದು.

ಶ್ರೀ ಸಿದ್ದರಾಮಯ್ಯ: ಆಗಬಹುದು. ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಣಕಾಸಿನ ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ. ಇದು ಬಜೆಟ್ ಸೆಷನ್.

ಅಧ್ಯಕ್ಷರು: ಮುಖ್ಯಮಂತ್ರಿಗಳು ಬಂದರು ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ನೀವು ಮಾತನಾಡುವುದನ್ನು ಕೇಳಲಿಕ್ಕೆ ನಾನು ಬಂದಿದ್ದೇನೆ. ನೀವು ಮಾತನಾಡುವಾಗ